**ಸಾಕ್ಷಿಯನ್ನು ದಿನಾಂಕ: 10.11.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4ನೇ ಪ್ರತಿವಾದಿಗಳ ಪರ ಶ್ರೀ VGB ವಕೀಲರಿಂದಃ**

ನಾನು ಪದವೀದರ. ನಾನು ಹುಬ್ಬಳ್ಳಿ ತಾಲೂಕಿನ ಕುಸುಗಲ್ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಾನು ಮಲ್ಲಾಪೂರ ಗ್ರಾಮದಲ್ಲಿ ಜನಿಸಿದ್ದು 4ನೇ ತರಗತಿಯವರೆಗೆ ವಿದ್ಯಭ್ಯಾಸವನ್ನು ಮಲ್ಲಾಪೂರ ಗ್ರಾಮದಲ್ಲಿ ಮಾಡಿರುತ್ತೇನೆ. ನಂತರ 5ನೇ ತರಗತಿಯಿಂದ ಕುಸುಗಲ್ ಗ್ರಾಮದಲ್ಲಿದ್ದು ಇಂದಿನವರೆಗೂ ಅಲ್ಲಿಯೇ ವಾಸವಾಗಿರುತ್ತೇನೆ. ನಾನು ಶಂಕರ ಚಂದರಗಿ ಎಂಬುವವರ ಮೊಮ್ಮಗ ಎಂದರೆ ನಿಜ. ನಾನು ಶಂಕರ ಚಂದರಗಿ ಇವರ ಮಗನ ಮಗ. ನನ್ನ ತಂದೆಯ ಹೆಸರು ಚೆನ್ನಬಸಪ್ಪ ಚಂದರಗಿ. ನನ್ನ ತಾಯಿಯ ಊರು ಕುಸುಗಲ್ ಎಂದರೆ ನಿಜ. ನಾನು ಚಿಕ್ಕವನಿರುವಾಗಲೇ ಕುಸುಗಲ್ ಗ್ರಾಮದ ನನ್ನ ತಾಯಿಯ ತವರು ಮನೆಯಲ್ಲಿರುವುದರಿಂದ ನನಗೆ ಮಲ್ಲಾಪೂರ ಗ್ರಾಮದಲ್ಲಿರುವ ನನ್ನ ತಂದೆಯ ಹಾಗೂ ನನ್ನ ಅಜ್ಜನ ಮನೆತನದ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ನಿಜ.

ನನ್ನ ಅಜ್ಜ ಶಂಕರ ಚಂದರಗಿ ಇವರಿಗೆ 5 ಜನ ಹೆಣ್ಣುಮಕ್ಕಳು ಹಾಗೂ 2 ಜನ ಗಂಡು ಮಕ್ಕಳು ಇರುತ್ತಾರೆ. ನಾವು ಈ ದಾವೆಯನ್ನು ನನ್ನ ತಂದೆ, ನನ್ನ ಚಿಕ್ಕಪ್ಪ ಹಾಗೂ 4ನೇ ಪ್ರತಿವಾದಿಯ ವಿರುದ್ದ ಹೂಡಿರುತ್ತೇವೆ. ಶಂಕರ ಚಂದರಗಿ ಇವರ 5 ಜನ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ

ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಎಂದರೆ 2 ಮನೆ ಮತ್ತು 3 ಜಮೀನುಗಳು ಇರುತ್ತವೆ. ಸದರಿ ದಾವಾ ಆಸ್ತಿಗಳಲ್ಲಿ 2 ಮನೆಗಳನ್ನು ನಾನು ಮಲ್ಲಾಪೂರ ಗ್ರಾಮವನ್ನು ಬಿಟ್ಟು ಹೋಗವ 2 ವರ್ಷಗಳ ಮೊದಲು ಕಟ್ಟಿರುತ್ತಾರೆ. ಸದರಿ 2 ಮನೆಗಳನ್ನು ಯಾರು ಕಟ್ಟಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ದಾವಾ ಆಸ್ತಿಗಳಲ್ಲಿ 3 ಜಮೀನುಗಳನ್ನು ನನ್ನ ಅಜ್ಜನ ತಾಯಿ ಖರೀದಿ ಮಾಡಿರುತ್ತಾರೆ. ಸದರಿ ಎಲ್ಲಾ 3 ಜಮೀನುಗಳನ್ನು ನನ್ನ ಅಜ್ಜನ ತಾಯಿಯೇ ಖರೀದಿ ಮಾಡಿರುತ್ತಾರೆ. ನನ್ನ ಅಜ್ಜನ ತಾಯಿಯ ಹೆಸರು ಚಿನ್ನವ್ವ. ದಾವಾ ಆಸ್ತಿಯಾದ ಜಮೀನುಗಳನ್ನು ನನ್ನ ಅಜ್ಜನ ತಾಯಿಯಾವದ ಚಿನ್ನವ್ವಳೇ ಖರೀದಿ ಮಾಡಿರುತ್ತಾರೆ ಎಂದು ವಾದ ಪತ್ರದಲ್ಲಿ ಬರೆಯಿಸಿದ ಬಗ್ಗೆ ನನಗೆ ಈಗ ನೆನಪಿಲ್ಲ. ಸದರಿ ದಾವಾ ಆಸ್ತಿಗಳಾದ ಜಮೀನುಗಳನ್ನು ನನ್ನ ಅಜ್ಜನ ತಾಯಿಯಾದ ಚಿನ್ನವ್ವಳೇ ಖರೀದಿ ಮಾಡಿರುತ್ತಾಳೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಜಮೀನುಗಳ ಸರ್ವೆ ನಂಬರ ನನಗೆ ಈಗ ನೆನಪಿಲ್ಲ. ನಮ್ಮ ಅಜ್ಜ ಶಂಕರ ಇವರು ಪಂಚಾಯತಿ ಕಾರ್ಯದರ್ಶಿ ಅಂತಾ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಸದರಿಯವರು ಕನಿಷ್ಠ 35 ವರ್ಷಗಳ ಸೇವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಜಮೀನ ಸರ್ವೆ ನಂ. 155/1 ಕ್ಷೇತ್ರ 3 ಎಕರೆ 2 ಗುಂಟೆ ಆಸ್ತಿಯನ್ನು ನನ್ನ ಅಜ್ಜ ಶಂಕರ ಇವರು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ನನ್ನ ಅಜ್ಜನ ಕರ್ತವ್ಯದ ಬಂದ ಸಂಬಳದ ಹಣದಿಂದ ಖರೀದಿ

ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನನ್ನು ನನ್ನ ಅಜ್ಜನ ಹೆಸರಿನಲ್ಲಿ ಖರೀದಿ ಮಾಡಲು ನನ್ನ ಅಜ್ಜನ ತಾಯಿಯಾದ ಚಿನ್ನವ್ವ ಇವರು ಹಣ ಕೊಟ್ಟಿದ್ದರು. ಸರ್ವೆ ನಂ. 155/1 ನ್ನು ನನ್ನ ಅಜ್ಜ ಶಂಕರ ಇವರ ಹೆಸರಿನಲ್ಲಿ ಖರೀದಿ ಮಾಡಲು ಅವರ ತಾಯಿ ಚಿಣ್ಣವ್ವ ಇವರು ಹಣ ಕೊಟ್ಟಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೀರಿಯೇ ಎಂದರೆ ಸಾಕ್ಷಿಯು ಸದರಿ ದಾಖಲೆಗಳು ನನ್ನ ಚಿಕ್ಕಪ್ಪನ ಹತ್ತಿರ ಇರುತ್ತವೆ ಎಂದು ಹೇಳುತ್ತಾರೆ. ನಾನು ಹೀಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 155/1 ನ್ನು ನನ್ನ ಅಜ್ಜ ಶಂಕರ ಇವರು 4ನೇ ಪ್ರತಿವಾದಿಗೆ ನೊಂದಾಯಿತ ದಾನ ಪತ್ರದ ಮುಖಾಂತರ ದಾನ ಮಾಡಿರುತ್ತಾರೆ ಎಂದರೆ ನಿಜ. ಹೀಗೆ ದಾನ ಮಾಡಿದ ವಿಷಯವು ನನ್ನ ಅಜ್ಜನ ಕುಟುಂಬದ ಎಲ್ಲಾ ಸದಸ್ಯರಿಗೂ ಗೊತ್ತಿದ್ದು ಎಲ್ಲರೂ ಒಪ್ಪಿಗೆ ಕೊಟ್ಟ ನಂತರ ದಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಹೀಗೆ ದಾನ ಕೊಡುವ ಸಮಯದಲ್ಲಿ ನಮ್ಮ ಅಜ್ಜಿ ಸಹ ಇದ್ದರು ಎಂದರೆ ನಿಜ. ಸದರಿ ಜಮೀನನ್ನು ನೊಂದಾಯಿತ ದಾನ ಪತ್ರ ಮಾಡುವ ಸಮಯದಲ್ಲಿ ಸದರಿ ದಾನ ಪತ್ರದ ಜೊತೆಗೆ ಒಂದು Memorandum ಪತ್ರವನ್ನು ಮಾಡಿಕೊಂಡು ಸದರಿ ದಾನ ಕೊಟ್ಟ ಜಮೀನಿನಲ್ಲಿ ಬಂದ ಆದಾಯವನ್ನು ಯಾವ ರೀತಿ ಉಪಯೋಗ ಮಾಡಬೇಕೆಂಬ ಷರತ್ತುಗಳನ್ನು ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ Memorandum ಪತ್ರವನ್ನು ನೋಡಿ ಹೇಳಬಹುದು ಎಂದು ಹೇಳುತ್ತಾರೆ. ಸದರಿ Memorandum ಪತ್ರದ ಪ್ರಕಾರ ಸದರಿ ಜಮೀನಲ್ಲಿ ಬಂದ ಆದಾಯದಿಂದ

ಕಲ್ಮಠದ ಹೆಸರಿನಲ್ಲಿರುವ ಶಾಲೆಗೆ ಹಾಗೂ ಸದರಿ ಶಾಲೆಯ ಪ್ರಸಾದ ನಿಲಯಕ್ಕೆ ಹಾಗೂ ಮಠದ ಅಭಿವೃದ್ದಿಗೆ ಉಪಯೋಗಿಸತಕ್ಕದ್ದು ಎಂಬ ಷರತ್ತು ಇರುತ್ತದೆ ಎಂದು ಬರೆಯಿಸಲಾಗಿದೆ ಎಂದರೆ ನಿಜ. ಅದೇ ರೀತಿ Memorandum ಪತ್ರದಲ್ಲಿ ದಾನ ಕೊಟ್ಟ ಜಮೀನ ಉತ್ಪನ್ನದಿಂದ ಒಂದು ಸಭಾಗೃಹ ಕಟ್ಟಿ ಅದಕ್ಕೆ ನನ್ನ ಅಜ್ಜ ಶಂಕರ ಚಂದರಗಿ ಇವರ ಹೆಸರಿಡಬೇಕೆಂಬ ಷರತ್ ನ್ನು ಸಹ ಬರೆಯಿಸಲಾಗಿದೆ ಎಂದರೆ ನಿಜ. ನಂತರ ಅದೇ ರೀತಿ Memorandum ಪತ್ರದಲ್ಲಿ ದಾನ ಕೊಟ್ಟ ಜಮೀನನ್ನು ಮುಂದೆ ಮಾರಾಟ ಮಾಡುವ ಸಂದರ್ಭ ಬಂದರೆ ಮಾರಾಟ ಮಾಡಿದ ಹಣವನ್ನು ಪ್ರಸಾದ ನಿಲಯ ಮತ್ತು ಕಲ್ಮಠ ಹೆಸರಿನಲ್ಲಿರು ಮಠದ ಅಭಿವೃದ್ದಿಗೆ ಉಪಯೋಗ ಮಾಡುವ ಷರತನ್ನು ಬರೆಯಿಸಲಾಗಿದೆ ಎಂದರೆ ನಿಜ. ಅದೇ ರೀತಿ ಚಂದರಗಿ ಇವರು ಮನೆತನದ 2 ವಿದ್ಯಾರ್ಥಿ ಗಳಿಗೆ ಉಚಿತ ಶಿಕ್ಷಣವನ್ನು ಕೊಡುವ ಷರತ್ತನ್ನು ಸಹ ಬರೆಯಿಸಲಾಗಿದೆ ಎಂದರೆ ನಿಜ. ಅದೇ ರೀತಿ ಚಂದರಗಿ ಇವರ ಮನೆತನದಲ್ಲಿ 2 ಜನ ವಿದ್ಯಾರ್ಥಿಗಳು ಇರದೇ ಇದ್ದರೆ ಚಂದರಗಿ ಮನೆತನದವರು ಹೇಳಿದ ಎರಡು ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಕೊಡುವ ಷರತ್ತನ್ನು ಬರೆಯಿಸಲಾಗಿದೆ ಎಂದರೆ ನಿಜ. ಅದೇ ರೀತಿ Memorandum ಪತ್ರದಲ್ಲಿ ನನ್ನ ಅಜ್ಜ ಶಂಕರ ಇವರ ಹೆಂಡತಿ ಗಂಗವ್ವ ಇರುವವರೆಗೂ ದಾನ ಕೊಟ್ಟ ಜಮೀನಿನಲ್ಲಿ ಬಂದ ಉತ್ಪನ್ನವನ್ನು ಅವರೇ ಉಪಯೋಗ ಮಾಡಿಕೊಳ್ಳುವ ಷರತ್ತು ಇರುತ್ತದೆ ಎಂದರೆ ನಿಜ. ಸಾಕ್ಷಿಗೆ ಸದರಿ Memorandum ಪತ್ರವನ್ನು ಹಾಗೂ ನೊಂದಾಯಿತ ದಾನಪತ್ರವನ್ನು ತೋರಿಸಿದಾಗ ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಗುರುತಿಸಿ ಒಪ್ಪಿಕೊಂಡ ಕಾರಣ ನೊಂದಾಯಿತ ದಾನಪತ್ರವನ್ನು **ನಿಡಿ 1** ಹಾಗೂ Memorandum

ಪತ್ರವನ್ನು **ನಿಡಿ 2** ಎಂದು ಗುರುತಿಸಲಾಯಿತು. ಅದೇ ರೀತಿ ನಿಡಿ 2 ರಲ್ಲಿ ಷರಿತ್ತಿನ ಪ್ರಕಾರ ಒಂದು ಸಭಾಗೃತವನ್ನು ಕಟ್ಟಿಸಿ ಅದಕ್ಕೆ ನನ್ನ ಅಜ್ಜ ಶಂಕರ ಇವರ ಹೆಸರನ್ನು ಸಹ ಇಟ್ಟಿರುತ್ತಾರೆ ಎಂದು ಒಂದು ಛಾಯಾಚಿತ್ರವನ್ನು ಸಾಕ್ಷಿಗೆ ತೋರಿಸಿ ಕೇಳಿದಾಗ ಸಾಕ್ಷಿಯು ಸದರಿ ಛಾಯಾಚಿತ್ರವನ್ನು ನೋಡಿ ಒಪ್ಪಿ ಕೊಂಡ ಕಾರಣ ಸದರಿ ಛಾಯಾಚಿತ್ರವನ್ನು ಈಗ **ನಿಡಿ 3** ಎಂದು ಗುರುತಿಸಲಾಯಿತು. ಸಾಕ್ಷಿಗೆ ಸಭಾಗೃಹದ ನಾಮಕರಣ ಮಾಡುವ ಸಮಯದಲ್ಲಿ ತೆಗೆದಿರುವ ಛಾಯಾಚಿತ್ರಗಳನ್ನು ಹಾಗೂ ಕೆಲವು ಆಮಂತ್ರಣ ಪತ್ರಗಳನ್ನು ತೋರಿಸಿದಾಗ ಸಾಕ್ಷಿಯು ಸದರಿ ಛಾಯಾಚಿತ್ರಗಳನ್ನು ಹಾಗೂ ಆಮಂತ್ರಣ ಪತ್ರವನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ಈಗ **ನಿಡಿ 4 ರಿಂದ 22** ಎಂದು ಗುರುತಿಸಲಾಯಿತು. ನನ್ನ ಅಜ್ಜ ಜಮೀನನ್ನು ದಾನ ಕೊಟ್ಟ ಉದ್ದೇಶವನ್ನು 4ನೇ ಪ್ರತಿವಾದಿಯು ಇಂದಿಗೂ ನಡೆಸಿಕೊಂಡು ಹೋಗುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು, ಆಲಿಸಿ ಸಮಯವನ್ನು ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**